ಅಧ್ಯಕ್ಷರು : ಮಂತ್ರಿಗಳು ಅದನ್ನು ಮುಂದುವರಿಸುತ್ತೇನೆಂದು ಹೇಳುತ್ತಿದ್ದಾರಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ಮುಂದುವರಿಸಲು ಹೇಗೆ ಸಾಧ್ಯವಾಗುತ್ತದೆ? 1993-94ನೇ ಸಾಲಿಗೆ ಎಂದು ಅದನ್ನು ನಿಗದಿ ಮಾಡಿರುವುದು. ಆ ಹಣವನ್ನು 1994-95ಕ್ಕೆ ಮುಂದುವರಿಸಲು ಆಗುವುದಿಲ್ಲ. 1994-95ಕ್ಕೆ ಅವರು ಬೇರೆ ಹಣವನ್ನು ಕೊಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಎಷ್ಟೇ ವಾಯಿದೆಯನ್ನು ಗೊತ್ತು ಮಾಡಿದ್ದರು ಕೂಡ ಆಗಿಂದಾಗ್ಗೆ ಇಂಥ ಪ್ರಸಂಗಗಳು ಕೇಂದ್ರ ಸರ್ಕಾರದಲ್ಲಿ ಅನೇಕ ನಡೆದಿದೆ. ಇಂಥ ಸಂದರ್ಭ ಬಂದಾಗ ಹಣವು ಖರ್ಚಾಗದಿದ್ದರೆ ಅದಕ್ಕೆ ವಾಯಿದೆಯನ್ನು ಹೆಚ್ಚು ಮಾಡುವುದಾಗಲಿ, ಹೆಚ್ಚು ಹಣವನ್ನು ಒದಗಿಸಿಕೊಡುವುದಾಗಲಿ ಕೇಂದ್ರ ಸರ್ಕಾರದವರಿಗೆ ಸಾಕಷ್ಟು ಅಧಿಕಾರವಿದೆ. ಆ ವಿಷಯದಲ್ಲಿ ನನಗೆ ಸಾಕಷ್ಟು ನಂಬಿಕೆ ಇರುವುದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ರಾಜ್ಯದಲ್ಲಿ ಆಹಾರ ಧಾನ್ಯ ಉತ್ಪಾದನೆ ಬಗ್ಗೆ

39-ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರ ಆಹಾರ ಧಾನ್ಯ ಉತ್ಪಾದನೆಗೆ ನಿಗದಿ ಪಡಿಸಿದ ಗುರಿಯ ಪ್ರಮಾಣ ಎಷ್ಟು? (ಹಿಂಗಾರು ಮತ್ತು ಮುಂಗಾರು)

ಆ) ಆ ಗುರಿಯನ್ನು ಮುಟ್ಟಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು);

ಅ) ಕಳೆದ ಸಾಲುಗಳಲ್ಲಿ ಆದ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಶಿಫಾರಸ್ಸು ಮೇರೆಗೆ 92-93 ಹಾಗೂ 93-94ರ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ಈ ಕೆಳಕಂಡಂತೆ ನಿಗಧಿ ಪಡಿಸಲಾಗಿದೆ.

ಆಹಾರ ಧಾನ್ಯಗಳ ಉತ್ಪಾದನೆಯ ಗುರಿ (ಲಕ್ಷ ಟನ್ನುಗಳಲ್ಲಿ)

ಸಂ.	*ಹಂಗಾಮು*	*92-93*	*93-94*
1.	ಮುಂಗಾರು	62.10	62.35
2.	ಹಿಂಗಾರು	16.11	16.45
3.	ಬೇಸಿಗೆ	5.64	6.20
	ಒಟ್ಟು	**83.85**	**85.00**

ಆ) ಹೌದು. 92-93ನೇ ಸಾಲಿನಲ್ಲಿ ನಿಗಧಿಪಡಿಸಿದ ಗುರಿಯನ್ನು ಮುಟ್ಟಲಾಗಿದೆ. ಹಾಗೂ ವಿವರಗಳು ಈ ಕೆಳಗಿನಂತಿವೆ:ಸಾಧಿಸಿರುವ ಆಹಾರ ಉತ್ಪಾದನೆ (ಲಕ್ಷಟನ್ನುಗಳಲ್ಲಿ)

ಸಂ.	*ಹಂಗಾಮು*	*92-93*	*93-94*
1.	ಮುಂಗಾರು	62.61	57.50
2.	ಹಿಂಗಾರು	16.13	*
3.	ಬೇಸಿಗೆ	7.26	*
	ಒಟ್ಟು	86.00	*

* 93Ë94ನೇ ಹಿಂಗಾರು : ಬೇಸಿಗೆ ಡಂಗಾಮು ಇನ್ನು ಮುಗಿದಿರುವುದಿಲ್ಲ.

ಇ) ರಾಜ್ಯದ 93-94ನೇ ಸಾಲಿನ ಮುಂಗಾರು ಹಂಗಾಮಿನಲ್ಲೂ ಸಹ ಹವಾಮಾನ ಪೈಪರೀತ್ಯಗಳಿಂದಾಗಿ ಆಹಾರ ಉತ್ಪಾದನೆಯು 62.35 ಲಕ್ಷ ಟನ್‌ಗೆ ಬದಲಾಗಿ 57.50

ಲಕ್ಷ ಟನ್ ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಲಾಗಿದೆ. 4.85 ಲಕ್ಷ ಟನ್ ಉತ್ಪಾದನೆಯು ಕಡಿಮೆಯಾಗಬಹುದಾಗಿದೆ. 93-94ರ ಹಿಂಗಾರು : ಬೇಸಿಗೆ ಹಂಗಾಮು ಇನ್ನೂ ಮುಗಿದಿರುವುದಿಲ್ಲವಾದ ಕಾರಣ ಉತ್ಪಾದನೆಯ ಅಂದಾಜುವನ್ನು ತಯಾರಿಸಿರುವುದಿಲ್ಲ.

ಈ ಕೆಳಕಂಡ ಕಾರಣಗಳಿಂದಾಗಿ ಮುಂಗಾರು ಆಹಾರ ಉತ್ಪನ್ನ ಮತ್ತು ತನ್ಮೂಲಕ ಉತ್ಪಾದನೆಯಲ್ಲಿ ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

1. ಕೊರತೆ : ಅತ್ಯಲ್ಪ ಪೂರ್ವ ಮುಂಗಾರು ಮಳೆಯಿಂದಾಗಿ ಪ್ರಾರಂಭಿಕ ಬೆಳೆಗಳ ಬಿತ್ತನೆಯಲ್ಲಿ ಉಂಟಾದ ತಡೆ.
2. ನೈರುತ್ಯ ಮಾರುತದ ಅಸಮರ್ಪಕ ನಡವಳಿಕೆಯಿಂದಾಗಿ ಉತ್ತರ ಜಿಲ್ಲೆಗಳಲ್ಲಿ ಬಿತ್ತನೆಯು ಬಹುಮಟ್ಟಿಗೆ ಕುಂಠಿತಗೊಂಡಿರುವುದರಿಂದ.
3. ಜೂನ್ ಎರಡನೆ ಪಾಕ್ಷಿಕದಿಂದ ಜುಲೈ ಮಧ್ಯ ಭಾಗದವರಿಗೆ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ತಲೆದೋರಿದ ದೀರ್ಘಕಾಲದ ಒಣಹವೆ.
4. ಅಕ್ಟೋಬರ್ ತಿಂಗಳಲ್ಲಿ ರಾಜ್ಯದ ಉತ್ತರ ಜಿಲ್ಲೆಗಳಾದ ರಾಯಚೂರು, ಧಾರವಾಡ, ಬೆಳಗಾಂ, ಬಳ್ಳಾರಿ, ಗುಲ್ಬರ್ಗಾ ಮತ್ತು ಬಿಜಾಪುರದಲ್ಲಿ ಬಿದ್ದ ಭಾರಿ :ಅತಿಭಾರಿ ಮಳೆಯಿಂದಾಗಿ,

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಹಿಂಗಾರು ಮತ್ತು ಮುಂಗಾರಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ನಿಗದಿ ಮಾಡಿದಂಥ ಗುರಿಯನ್ನು ಸಾಧಿಸಿದ್ದೇವೆಂದು ಕೃಷಿ ಸಚಿವರು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ಉತ್ಪಾದನೆಯಲ್ಲಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವುದಕ್ಕೆ ಪ್ರಕೃತಿಯನ್ನು ಅವರು ದೂಷಣೆ ಮಾಡಿದ್ದಾರೆ. ನಾನು ಅದರಲ್ಲಿ ಕೇಳುವುದೇನೆಂದರೆ, ಪ್ರಕೃತಿ ದೋಷಗಳು ಒಂದು ಭಾಗ, ಮಾನವ ನಿರ್ಮಿತವಾದಂಥ ದೋಷಗಳೇನಿದೆ. ಅದಕ್ಕೆ ಈಗ ತಾನೆ ಹಿಂದಿನ ಪ್ರಶ್ನೆಗೆ ತಾವು ಉತ್ತರವನ್ನು ಕೊಡುತ್ತಾ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಉಪಯೋಗ ಮಾಡಿಕೊಳ್ಳದೇ ಇರತಕ್ಕಂಥ ಸ್ಥಿತಿಯಲ್ಲಿ ತಮ್ಮ ಇಲಾಖೆ ಇದೆ, ಇನ್ನು ಅರ್ಧ ಭಾಗದಷ್ಟು ಹಣವಿದೆ ಎಂದು ಹೇಳಿದ್ದೀರಿ. ಸರ್ಕಾರಗಳು ತೆಗೆದು ಕೊಳ್ಳತಕ್ಕಂಥ ನಿರ್ಣಯಗಳಿಂದ ಮತ್ತು ಹೊಸ ಆರ್ಥಿಕ ನೀತಿಯಿಂದಾಗಿ ರಸಗೊಬ್ಬರದ ಬೆಲೆಯ ವಿಪರೀತ ಏರಿಕೆ ಮತ್ತು ಅದಕ್ಕೆ ಸ್ವಲ್ಪ ಮಟ್ಟಿಗೆ ಕೊಟ್ಟಿರತಕ್ಕಂಥ ರಿಯಾಯತಿ ಅಥವಾ ಸಬ್ಸಿಡಿ ದರವೇನಿದೆ ಇದರ ಬಳಕೆಯಾಗದೇ ಇರತಕ್ಕಂಥದ್ದು ಕೂಡ ಈ ಉತ್ಪಾದನೆಯಲ್ಲಿ ಕಡಿಮೆಯಾಗಲು ಕಾರಣವಾಗಿದೆಯೇ? ನೀವು ಕೊಡತಕ್ಕಂಥ ಬಿತ್ತನೆಯ ಬೀಜ, ಕೀಟನಾಶಕದ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇವುಗಳು ಸಮರ್ಪಕವಾಗಿ ಇಲ್ಲದಿರುವುದರಿಂದ ನಮ್ಮ ಆಹಾರದ ಉತ್ಪಾದನೆಯ ಒಟ್ಟು ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗದಿರುವುದು ಕಾರಣವಾಗಿಲ್ಲವೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನೀವು ಕೇಳಿದಂಥ ಪ್ರಶ್ನೆ ಹಿಂದೆ ಕೇಳಿದಂಥ ಪ್ರಶ್ನೆಗೆ ಅನ್ವಯಿಸತಕ್ಕಂಥದ್ದೆ ಎಂಬ ಬಗ್ಗೆ ನನಗೆ ಅರ್ಥವಾಗಿಲ್ಲ. ಹಿಂದೆ ಸದಸ್ಯರು ಕೇಳಿದ ಪ್ರಶ್ನೆಗೆ ಅನ್ವಯಿಸುವುದಾದರೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಎಷ್ಟು ರಿಯಾಯಿತಿಯನ್ನು ಸರ್ಕಾರ ಕೊಡಬಹುದಾಗಿತ್ತು ಅಷ್ಟನ್ನು ಸರ್ಕಾರ ಕೊಟ್ಟಿದೆ. ಆದರೆ ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಅದು ಇನ್ನು ಕೆಲವಾರು ತೊಂದರೆಗಳಿಂದ ನಿಧಾನ ಆಗಿರಬಹುದು. ಆದರೆ ಅದರ ವಾಯಿದೆಯನ್ನು ಹೆಚ್ಚು ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ ಎಂದು ನಾನು ಭಾವಿಸುತ್ತೇನೆ ಮತ್ತೆ ಅವರು ಕೇಳಿದಂಥ ಪ್ರಶ್ನೆಗೆ ನಮ್ಮ ಅಧಿಕಾರಿಗಳು ಸಾಕಷ್ಟು ಆಸಕ್ತಿಯನ್ನು ವಹಿಸಿ ಇದರಲ್ಲಿ ಕೆಲಸ ಮಾಡದೆ ಇರುವುದರಿಂದ ಇಲ್ಲಿ ತೊಂದರೆಯುಂಟಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯದ ಜಿಲ್ಲೆಗಳಾದ ರಾಯಚೂರು, ಧಾರವಾಡ, ಬೆಳಗಾಂ, ಬಳ್ಳಾರಿ, ಗುಲ್ಬರ್ಗಾ, ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದಾಗಿ ಕೆಲಸ ವಾಗಲಿಲ್ಲ. ಇದರಿಂದ ಉತ್ಪತ್ತಿ ಸಾಕಷ್ಟು ಕಡಿಮೆ ಆಗುವುದಕ್ಕೆ ಕಾರಣ ಆಯಿತು. ಎರಡನೆಯದಾಗಿ ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ತಲೆದೋರಿದಂತಹ ದೀರ್ಘಕಾಲದ ಒಣಹವೆ, ಮೂರನೆಯದು ನೈರುತ್ಯದ ಅಸಮರ್ಪಕ ನಡವಳಿಕೆಯಿಂದ ಆಗಿರುವಂತಹ ತೊಂದರೆಗಳು, ಇಂತಹ ತೊಂದರೆಗಳು ಮನುಷ್ಯನಿಂದ ನಿರ್ಮಾಣವಾದಂತಹ ತೊಂದರೆಗಳಲ್ಲ. ಇದು ವೈವಿಕವಾಗಿ ಬಂದಂತಹ ತೊಂದರೆಗಳು. ಇದರಿಂದ ಅಡ್ಡಿಯಾಗಿದೆ ಎಂಬುದು ಉತ್ತರದಲ್ಲಿ ಸ್ಪಷ್ಟವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೇಳಿದ್ದುದು ಇಳುವರಿ ಕಡಿಮೆಯಾಗುವುದಕ್ಕೆ ಪ್ರಕೃತಿಯಷ್ಟನ್ನೇ ದೂಷಿಸಿದ್ದೀರಿ. ಮನುಷ್ಯ ನಿರ್ಮಾಣ ದೋಷಗಳಿವೆಯಲ್ಲಾ, ಗೊಬ್ಬರದ ಬೆಲೆ ಏರಿಕೆ, ದೋಷ ಪೂರಿತವಾದಂತಹ ಬೀಜ, ಕೀಟನಾಶಕ, ಇವುಗಳಿಂದಲೂ ಇಳುವರಿ ಕಡಿಮೆ ಆಗಿದೆ ಎನ್ನತಕ್ಕದ್ದು; ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ತಿಳಿಸಿದ ಹಾಗೆ ಇದು ಅಧಿಕಾರಿಗಳಿಂದ ಆಗಿಲ್ಲ, ಗೊಬ್ಬರದ ಬೆಲೆ ಏರಿಕೆ ಅದಕ್ಕೆ ಕಾರಣ ನಾವಲ್ಲ, ಕೇಂದ್ರ ಸರ್ಕಾರ ಗೊತ್ತು ಮಾಡಿರುವಂತಹ ಬೆಲೆಗೆ ನಾವು ಮಾರಬೇಕಾಗುತ್ತದೆ. ಇನ್ನು ಸಾಕಷ್ಟು ನೀರಿನ ಅನುಕೂಲ ಇಲ್ಲದೇ ತೊಂದರೆಯಾಗಿದೆ. ಇಂತಹ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದೆ. ಇಂತಹ ತೊಂದರೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇದರಲ್ಲಿ 1992-93ನೇ ಸಾಲನಲ್ಲಿ ನಾವು ಏನು ಗುರಿ ಇಟ್ಟುಕೊಂಡಿದ್ದೆವೂ ಅದಕ್ಕಿಂತಲೂ ಹೆಚ್ಚಾಗಿ ಅಂದರೆ 4 ಲಕ್ಷ ಎಕರೆ ಭತ್ತ ಮುಂಗಾರು ಬೆಳೆಯಾಗಿದೆ. ಯಾವ ವರ್ಷದಲ್ಲೂ ಇಷ್ಟು ಹೆಚ್ಚಾಗಲಿಲ್ಲ; ಎಂಬುದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಗ್ರಾಮಪಂಚಾಯತಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಮೀಸಲಾತಿ ನೀತಿ.

111-ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮೀಸಲಾತಿಗಳ ಬಗ್ಗೆ ಸರ್ಕಾರದ ನಿಲುವೇನು;

ಆ) ಈಗಿರುವ ಸರ್ಕಾರಿ ಆಜ್ಞೆಯನ್ನು ಬದಲಾವಣೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೆ ;

ಇ) ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಬದಲಾವಣೆ ಮಾಡಲಾಗುವುದು;

ಈ) ಗ್ರಾಮ ಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು);

ಅ) 73ನೇ ಸಂವಿಧಾನ ತಿದ್ದುಪಡಿ ಕಾಯಿದೆಗೆ ಅನುಗುಣವಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 44(2)ರಲ್ಲಿ ಹೇಳಿರುವಂತೆ ವಿವಿಧ ವರ್ಗಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗೆ ಮೀಸಲಾತಿ ನೀಡಲಾಗುವುದು.

ಆ) ದಿನಾಂಕ : 21-12-1993ರ ಸರ್ಕಾರದ ಆದೇಶ ಮಾರ್ಪಾಟುಗೊಳಿಸಿ ದಿನಾಂಕ : 2-2-1994ರಂದು ಆದೇಶ ಹೊರಡಿಸಿದೆ.

ಇ) ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಚುನಾಯಿತ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವ ಗ್ರಾಮ